“ಮೊದಮೊದಲು ನಾನು ನಿಮ್ಮೊಂದಿಗೆ ದಕ್ಷಿಣ ಆಫ್ರಿಕಾಗೆ ಬಂದಾಗ ನೀವು ನನಗಾಗಿ ಸಮಯವನ್ನು ಕೊಡಬೇಕೆಂಬ ಆಸೆ ಇತ್ತು. ಆದರೆ, ಮೊದಲ ಪಯಣದಲ್ಲೇ ನಾನೂ, ಮಕ್ಕಳೂ ಬೇರೆಯಾಗಿ ಉಳಿದುಕೊಂಡೆವು. ಭಾಷೆಯೂ ಅರ್ಥವಾಗಲಿಲ್ಲ. ಮನುಷ್ಯರೂ ಅರ್ಥವಾಗಲಿಲ್ಲ. ನಿಮ್ಮ ಪರಿಸ್ಥಿತಿ ಏನೆಂದೂ ತಿಳಿಯಲಿಲ್ಲ. ಅನಂತರ ಬಂದ ಸುದ್ದಿಯಲ್ಲಿ ನಿಮಗೆ ಹೊಡೆದು ಚಿತ್ರಹಿಂಸೆ ಮಾಡಿದರು ಎಂದು ಹೇಳಿದರು.”

ಮಾತಿನ ನಡುವೆ ನುಸುಳುವ ಉದ್ದೇಶಕ್ಕೆ ಮೋಹನ್ ಮೆಲ್ಲಗೆ ನಗುತ್ತಾರೆ.

“ಹಡಗಿನಿಂದ ಇಳಿದು ದೋಣಿಯಲ್ಲಿ ಲೇಪ್ಪನಿಗೆ ಹೋಗುವಾಗ ನಾನೂ ಅದನ್ನು ಯೋಚಿಸಿದೆ ಕಸ್ತೂರ್.”

‘‘ತುಂಬಾ ಹೆದರಿದಿರೇನು?”

“ಏನಂತ ಹೇಳುವುದು ಗೊತ್ತಾಗುತ್ತಿಲ್ಲ. ದೋಣಿ ಮರಳು ದಿಬ್ಬವನ್ನು ದಾಟಿದಾಗ ಬಲಗಡೆ ನನ್ನ ಮೇಲೆ ದ್ವೇಷ ಸಾಧಿಸುವ ಡರ್ಬನ್ ನಗರ. ಎಡಗಡೆ ದಟ್ಟವಾದ ಕಾಡು ಬೆಳೆದ ಗುಡ್ಡ. ಅದನ್ನು ದಾಟಿ ದೊಡ್ಡ ಸಮುದ್ರ. ತಾಯ್ನಾಡನ್ನೂ ತೊರೆದು, ನಿಮ್ಮನ್ನೂ ಬಿಟ್ಟು ನಾನು ಎಲ್ಲೋ ಒಂಟಿಯಾಗಿ ಇದ್ದೆ. ಅದು ಎಂತಹ ಮನಃಸ್ಥಿತಿ ಎಂದು ಹೇಳಲು ತಿಳಿಯುತ್ತಿಲ್ಲ. ಕಸ್ತೂರ್, ದಡದಲ್ಲಿ ಇಳಿದಾಗ ಅವರು ನನ್ನನ್ನು ಹೊಡೆದಾಗಲೂ ಅದೇ ಮನಃಸ್ಥಿತಿ ಇತ್ತು.”

“ಇಲ್ಲಿ ಯಾರಾದರೂ ಡಾಕ್ಟರ್ ಇದ್ದೀರಾ? ಇದ್ದರೆ ದಯಮಾಡಿ ಬನ್ನಿ. ಬಾಪೂವಿಗೆ ಗುಂಡೇಟು ಬಿದ್ದಿದೆ. ಅವರಿಗೆ ಪ್ರಥಮ ಚಿಕಿತ್ಸೆ ನೀಡಬೇಕು. ಪ್ಲೀಸ್ ಬನ್ನಿ...” ಪರಿತಾಪವೂ ಪರದಾಟವೂ ಸೇರಿ ಎಲ್ಲಕಡೆ ಅಲೆ ಅಪ್ಪಳಿಸುವ ದನಿಗಳು ಮೋಹನ್‌ನ ಮಾತನ್ನು ನಿಲ್ಲಿಸಿದವು. ಜತೆಯಲ್ಲಿಯೇ ದೇಹವನ್ನು ಕಿತ್ತು ತಿನ್ನುವ ನೋವು. ಬಾಪು...ಬಾಪೂ... ಕಿಬ್ಬೊಟ್ಟೆಯಿಂದ ಎದ್ದ ಭಾವಪೂರ್ಣವಾದ ಆಕ್ರಂದನದ ದನಿಗಳು. ತಾಳಲಾರದೇ ಸಿಡಿದು ಛಿದ್ರವಾದ ಮನಸ್ಸಿನೊಂದಿಗೆ ಕಣ್ಣೀರು ಹರಿಸುತ್ತಾ ಬೆದರಿ ನಿಂತ ಗುಂಪು ಮೈದಾನದ ಶಾಂತಿಯನ್ನು ಕೆಡವಿತ್ತು. ಬಿರ್ಲಾ ಮಂದಿರದ ಮುಂದೆ ನೂಕು ನುಗ್ಗಾಟದಲ್ಲಿದ್ದ ಗುಂಪನ್ನು ಸಂಭಾಳಿಸಲು ಹೆಬ್ಬಾಗಿಲನ್ನು ಮುಚ್ಚಲಾಯಿತು.

“ಮೋಹನ್, ಪ್ರಜ್ಞೆ ತಪ್ಪಬೇಡಿ. ಈ ಜನಗಳನ್ನು ನೋಡಿ. ಇದು ನಿಮಗಾಗಿ ಸೇರಿದ ಗುಂಪು. ಅವರಿಗೆ ಮೋಸ ಮಾಡಬೇಡಿ. ಎದ್ದೇಳಿ, ಕೊನೆಯದಾಗಿ ಮತ್ತೊಮ್ಮೆ ಪ್ರಯತ್ನಿಸಿ ನೋಡಿ.”

“ಸರಿ ಕಸ್ತೂರ್, ಖಂಡಿತ ಪ್ರಯತ್ನಿಸುತ್ತೇನೆ. ಅಲ್ಲಿಯವರೆಗೆ ನೀನು ನನ್ನ ಜತೆ ಮಾತನಾಡುತ್ತಿರು. ಅದು ನಿನ್ನ ಕರ್ತವ್ಯ ಸಹ. ಯಾಕೆಂದರೆ, ನೀನು ನನ್ನ ಹೆಂಡತಿ.”

“ಮೋಹನ್, ಆ ಹೆಂಡತಿ ಎಂಬ ಸ್ಥಾನಕ್ಕೂ ಎರಡು ಸಲ ಸಮಸ್ಯೆಯಾಗಿದೆ ಅಲ್ಲವೇ?’’

‘‘ಹಾಗೇನು?... ನಾನು ಏನನ್ನೂ ಆಲೋಚಿಸುವ ಸ್ಥಿತಿಯಲ್ಲಿಲ್ಲ. ಹೆಚ್ಚಾಗಿ ಮಾತನಾಡಲು ಆಗುತ್ತಿಲ್ಲ.”

‘‘ದಕ್ಷಿಣ ಆಫ್ರಿಕಾದಲ್ಲಿ ನಾವು ಫೀನಿಕ್ಸ್ ಕಾಲನಿಯಲ್ಲಿ ವಾಸವಿರುವಾಗ ನೀವು, ಇನ್ನು ಸ್ವಲ್ಪ ದಿನದಲ್ಲಿ ನಾನು ಮಡದಿ ಎಂಬ ಅಂತಸ್ತನ್ನು ಕಳೆದುಕೊಳ್ಳುತ್ತೇನೆ ಎಂದು ಹೇಳಿದಾಗ ನಾನು ಹೆದರಿಹೋದೆ. ಕ್ರೈಸ್ತ ಮತದ ಪದ್ಧತಿಯಂತೆ ಮಾಡಿಕೊಳ್ಳುವ ಮದುವೆಯೇ ಕಾನೂನು ಬದ್ಧವಾದದ್ದು ಎಂದು ಸರಕಾರ ಹೇಳಿದೆ. ಅಯ್ಯೋ, ಇದೇನು ತಮಾಷೆ. ಕಾನೂನಿನ ಮುಂದೆ ‘ಇಟ್ಟುಕೊಂಡವಳು’ ಎಂದು ಕರೆಸಿಕೊಳ್ಳುವುದಕ್ಕಿಂತ ಚಳವಳಿಯಲ್ಲಿ ಭಾಗವಹಿಸಿ ಜೈಲಿಗೆ ಹೋದರೂ ತಪ್ಪಿಲ್ಲ ಎಂದು ನನಗೆ ತೋರಿತು. ನಾನು ಜೈಲಿನಲ್ಲಿಯೇ ಸತ್ತುಹೋದರೆ ನನ್ನ ಪ್ರತಿಮೆ ಮಾಡಿ ಪೂಜಿಸುವುದಾಗಿ ನೀವು ಹೇಳಿ ನಕ್ಕಿದ್ದು ನೆನಪಿದೆ.”

‘‘ಹ... ನೀನು ಜೈಲಿಗೆ ಹೋದದ್ದು ಅದೇ ಮೊದಲು, ಅಲ್ಲವೇ?”